ಅದರ ಬಗ್ಗೆ ಈ ಸದನದಲ್ಲಿ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಿರಿ.

ಕಳೆದ ಎರಡು ದಿವಸಗಳಿಂದ ಸತತವಾಗಿ ಚರ್ಚೆ ಮಾಡುತ್ತಿದ್ದರೂ ಕೂಡ ಸರ್ಕಾರದ ಕಡೆಯಿಂದ ಸರಿಯಾದ ಉತ್ತರ ಬಾರದೇ ಇರುವುದರಿಂದ ರೈತ ಇವತ್ತು ಕಂಗಾಲಾಗಿದ್ದಾನೆ. ಇದು ಬರೀ ಯಡಿಯೂರಪ್ಪನ ಒಬ್ಬರ ಪ್ರಶ್ನೆ ಅಲ್ಲ. ಇದು ಇಡೀ ಸದನದ ಎಲ್ಲಾ ಸದಸ್ಯರ ಪ್ರಶ್ನೆ ಆಗಿದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್ಸ್ ರೈತರ ಮೇಲೆ ಕೇಸ್‌ಗಳನ್ನು ಹಾಕಿ ಸಾಲ ವಸೂಲಾತಿ ಮಾಡುತ್ತಿದ್ದಾರೆ.

ಅಧ್ಯಕ್ಷರು : ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ಈ ವಿಷಯದ ಬಗ್ಗೆ ಸಮಗ್ರವಾಗಿ ಚರ್ಚೆ ಅನೇಕ ಸಲ ಆಗಿದೆ. ಆದರೂ ಕೂಡ ಸರ್ಕಾರ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಈ ಸರ್ಕಾರಕ್ಕೆ ಕಣ್ಣು ಇಲ್ಲ ಮೂಗು ಇಲ್ಲ ಕಿವಿ ಇಲ್ಲದೆ ಕುಳಿತುಕೊಂಡಿದೆ. ಮಾನ್ಯ ಮುಖ್ಯಮಂತ್ರಿಗಳು ಕೊಟ್ಟು ಭರವಸೆ ಏನಾಯಿತು?

ಅಧ್ಯಕ್ಷರು : ಈಗ ನಾನು ಸಭೆಯನ್ನು ಮಂದೂಡಿಸಲ್ಪಟ್ಟು ಮತ್ತೆ 3-00 ಗಂಟೆಗೆ ಸಮಾವೇಶಗೊಳ್ಳುವುದು.

(ಸಭೆಯು 2-00 ಗಂಟೆಗೆ ಮುಕ್ತಾಯವಾಯಿತು)

ಸಭೆ ಪುನಃ 3 ಗಂಟೆ 20 ನಿಮಿಷಕ್ಕೆ ಸಮಾವೇಶಗೊಂಡಿತು.

(ಅಧ್ಯಕ್ಷರು ಶ್ರೀ ವಿ.ಎಸ್. ಕೌಜಲಗಿ ಅವರು ಪೀಠದಲ್ಲಿ ಉಪಸ್ಥಿತರಿದ್ದರು)

4. ಗಮನ ಸೆಳೆಯುವ ಸೂಚನೆಗಳು

ರಾಜ್ಯದ ಆರು ಜಿಲ್ಲೆಗಳಲ್ಲಿ ಐ.ಪಿ.ಪಿ.ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಪೀಠೋಪಕರಣಗಳಿಲ್ಲದಿರುವ ಬಗ್ಗೆ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ರಾಜ್ಯದ ಆರು ಜಿಲ್ಲೆಗಳಲ್ಲಿ ಐ.ಪಿ.ಪಿ.ಯೋಜನೆಯಡಿಯಲ್ಲಿ ನಿರ್ಮಾಣವಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮುಂತಾದವುಗಳಿಗೆ ಸಮರ್ಪಕವಾದ ಪೀಠೋಪಕರಣಗಳಿಲ್ಲದೆ, ಸಿಬ್ಬಂದಿಗಳ ಕೊರತೆಯಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ.ಎಸ್. ಪಾಟೀಲ್ ಸಾಸನೂರು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ

ಭಾರತ ಜನಸಂಖ್ಯಾ ಯೋಜನಾ-3ನ್ನು ವಿಶ್ವಬ್ಯಾಂಕ್ ನಿರವಿನಿಂದ 1984-85ರಿಂದ 1991-92ರ ತನಕ ಕಾರ್ಯಗತಗೊಳಿಸಿದ್ದು ಇದರ ವಿವರಗಳು ಈ ಕೆಳಕಂಡಂತೆ ಇವೆ.

		ಕೋಟಿ ರೂ.ಗಳಲ್ಲಿ
1. ಸಿವಿಲ್ ವರ್ಕ್ಸ್	-	48.94
2.ಪೀಠೋಪಕರಣಗಳು	-	2.25
3. ಸಲಕರಣೆಗಳು	-	2.25
4. ವಾಹನಗಳು	-	2.80
5. ಸಿಬ್ಬಂದಿ ಸಂಬಳ	-	8.66
6. ಕನ್‌ಸಲ್ಟೆಂಟ್ ಸರ್ವೀಸ್ ಅಂಡ್ ಟ್ರೈನಿಂಗ್	-	0.76

7. ಇತರೆ ನಿರ್ವಹಣೆ ಖರ್ಚು ವೆಚ್ಚಗಳು	-	5.26
8. ಇತರೆ ವೆಚ್ಚಗಳು	-	0.32
ಒಟ್ಟು		71.24

ಈ ಕಾರ್ಯಕ್ರಮದಲ್ಲಿ 700 ಸೇವಾ ಘಟಕಗಳು, 225 ಸಹಾಯಕ ಆರೋಗ್ಯ ಕೇಂದ್ರಗಳು, 82 ಪ್ರಾಥಮಿಕ ಆರೋಗ್ಯ ಕೇಂದ್ರಗಳು, 30 ಸಮುದಾಯ ಆರೋಗ್ಯ ಕೇಂದ್ರಗಳು, 17 ಬಿಡಾರ ಶಾಲೆಗಳು, 6 ಮಹಿಳಾ ವಿವಿದ್ಧೋದೇಶ ಆರೋಗ್ಯ ಕಾರ್ಯಕರ್ತರ ವಿದ್ಯಾರ್ಥಿ ನಿಲಯಗಳು ಹಾಗೂ 2ತರಬೇತಿ ಕೇಂದ್ರಗಳನ್ನು ಕಟ್ಟಲಾಗಿದೆ. ಈ ಕಟ್ಟಡಗಳ ಪೈಕಿ ಎರಡು ಎ.ಎನ್.ಎಂ. ಸಬ್‌ಸೆಂಟರ್‌ಗಳನ್ನು ಹಾಗೂ 14 ಸಹಾಯಕ ಆರೋಗ್ಯ ಕೇಂದ್ರಗಳನ್ನು ಬಿಟ್ಟು ಉಳಿದ ಎಲ್ಲಾ ಕಟ್ಟಡಗಳನ್ನು ಸಂಬಂಧಪಟ್ಟ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಒಪ್ಪಿಸಲಾಗಿದೆ.

ಈ ಕೇಂದ್ರಗಳಿಗೆ ಒಟ್ಟು ರೂ.225.35 ಲಕ್ಷಗಳ ಪೀಠೋಪಕರಣಗಳನ್ನು ಸಣ್ಣ ಕೈಗಾರಿಕಾ ಮಾರಾಟ ನಿಗಮ ನಿಯಮಿತ, ಬೆಂಗಳೂರು, ಇವರಿಂದ ಅನುಮೋದಿತ ಸಂಸ್ಥೆಗಳಿಂದ ಖರೀದಿಸಿ, ಸಣ್ಣ ಕೈಗಾರಿಕಾ ಮಾರಾಟ ನಿಗಮ ನಿಯಮಿತ, ಇವರಿಂದ ದೃಢೀಕರಿಸಿ ನಂತರ ಸರಬರಾಜು ಮಾಡಲಾಗಿದೆ.

ಇನ್ನು ಈ ಬಾಬ್ತಿನಲ್ಲಿ 79 ಲಕ್ಷ ರೂಪಾಯಿಗಳು ಇದ್ದು, ಬೇಕಾಗುವ ಉಪಕರಣಗಳನ್ನು ಖರೀದಿಸಲಾಗುವುದು.

ಈ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆ, ಭೂಸೇನಾ ನಿಗಮ ಹಾಗೂ ಕರ್ನಾಟಕ ರಾಜ್ಯ ಕಟ್ಟಡಗಳ ನಿರ್ಮಾಣ ನಿಗಮ, ಕಟ್ಟಿವೆ. ಈ ಕಟ್ಟಗಳ ಪೈಕಿ, ಕೆಲವು ಕಟ್ಟಡಗಳ ಕಿಟಕಿ, ಬಾಗಿಲುಗಳು ಕಳಪೆ ಮಟ್ಟದ್ದು ಎಂದು ದೂರುಗಳು ಬಂದಿವೆ. ಇದರ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸಂಬಂದಪಟ್ಟ ಇಲಾಖೆಗಳಿಂದ ದುರಸ್ಥಿ ಮಾಡಿಸಲು ಕ್ರಮ ಕೈಗೊಳ್ಳಲಾಗುವುದು.

ಈ ಕೇಂದ್ರಗಳಿಗೆ ಒಟ್ಟು 73 ಸಿಬ್ಬಂದಿಯ ಕೊರತೆ ಇದ್ದು. ಕೆಳಕಂಡ ಸಿಬ್ಬಂದಿಯನ್ನು ಸದ್ಯದಲ್ಲಿಯೇ ಮಂಜೂರು ಮಾಡಲಾಗುವುದು.

1. ಎಕ್ಸ್‌ರೇ ಲ್ಯಾಬ್ ಟೆಕ್ನಿಷಿಯನ್	-	14
2. ಜೂನಿಯರ್ ಲ್ಯಾಬ್ ಟೆಕ್ನಿಷಿಯನ್	-	8
3. ಸ್ಟಾಫ್ ನರ್ಸ್	-	16
4. ಎಫ್.ಡಿ.ಎ.	-	9
5. ಗ್ರೂಪ್-ಡಿ	-	-
ಹಾಗೂ ವೈದ್ಯರು.	-	25

ಹೊಸದಾಗಿ ಮಂಜೂರಾದ ಸಿಬ್ಬಂದಿ ವರ್ಗದವರನ್ನು ಪೋಸ್ಟ್ ಮಾಡಿ ಈ ಕೇಂದ್ರಗಳನ್ನು ಸಂಪೂರ್ಣವಾಗಿ ಕಾರ್ಯನಿರ್ವಹಿಸುವಂತೆ ಮಾಡಲಾಗುವುದು.

ಉಳಿದ ಕೊರತೆಗಳನ್ನು ನೇಗಿಸಲಾಗುವುದು.

+ ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು, ತಮ್ಮ ಉತ್ತರದಲ್ಲಿ ಐಟಂ ನಂಬರ್ (7) ರಲ್ಲಿ ಇತರೇ ವೆಚ್ಚಗಳು ಅಂತ 5ಕೋಟಿ 26 ಲಕ್ಷಗಳು ಅಂತ ಹೇಳಿದ್ದಾರೆ. ಈ 5 ಕೋಟಿ 26 ಲಕ್ಷ ವೆಚ್ಚ ಯಾವುದರ ಬಗ್ಗೆ ಖರ್ಚು ಮಾಡಿದ್ದಾರೆ ಎನ್ನುವುದಕ್ಕೆ ನನಗೆ ಒಂದು ಸ್ಪಷ್ಟೀಕರಣ ಬೇಕಾಗಿದೆ.

ಅದರ ಪ್ರಕಾರ ಮಾನ್ಯ ಸಚಿವರು ಸಹ ಇಲ್ಲಿ ಕಿಟಿಕಿ ಬಾಗಿಲು ಕಳಪೆಮಟ್ಟದ್ದು ಆಗಿದೆ ಅದು ನಾವು ರಿಪೇರಿ ಮಾಡುತ್ತೇವೆ ರಿಪ್ಲೇಸ್ ಮಾಡುತ್ತೇವೆಂದು ಹೇಳಿದಿರಿ ಅದು ಸಾಲದು ಮಾನ್ಯ ಅಧ್ಯಕ್ಷರೇ ಇದು ಏನಾಗಿದೆ ಅಂದ್ರೆ ಇದು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರ ಮತ್ತು ವಿಶ್ವಬ್ಯಾಂಕ್ ಈ ಮೂರು ನೆರವಿನಿಂದ ಮಾಡಿರತಕ್ಕದ್ದು ಈ ಐ ಪಿ ಪಿ ಮೂರನೇ ಪ್ರಾಜೆಕ್ಟ್‌ನಲ್ಲಿ ಗುಲ್ಬರ್ಗ ಬೀದರ್ ಬಿಜಾಪುರ ರಾಯಚೂರ್ ಬೆಳಗಾಂ ಮತ್ತು ಧಾರವಾಡ ಈ 6 ಜಿಲ್ಲೆಗಳಲ್ಲಿ ಮಾನ್ಯಸಚಿವರು ಹೇಳಿದಹಾಗೆ ಹಲವಾರು ಆಸ್ಪತ್ರೆಗಳು ಮಂಜೂರಾಗಿದ್ದಾರೆ. ಅಫ್‌ಗ್ರೇಡ್ ಆಗಿದ್ದಾವೆ. ನನ್ನ ಕಡೆ ಕೆಲವು ಫೋಟೋಗ್ರಾಫ್ಸ್ ಇವೆ ನಾನು ಅವುಗಳನ್ನು ತಮಗೆ ತೋರಿಸುತ್ತೇನೆ. ಅಲ್ಲಿ ಕಟ್ಟಡಗಳ ಕೆಲಸ ಅತಿ ಕಳಪೆಮಟ್ಟದ್ದು ಆಗಿದೆ. ಹಲವಾರು ಕಡೆ ಕಟ್ಟಡಗಳು ಇನ್ನೂ ಉದ್ಘಾಟನೆ ಆಗಿಲ್ಲ. ಲಾಕ್ ಮಾಡಿ ಇಟ್ಟೀದ್ದೀರಿ. 9 ಎಕ್ಸ್‌ರೇ ಮೆಷಿನ್ಸ್ ಖರೀದಿಸಿ 3 ವರ್ಷಗಳಾಯಿತು. ಆ ಎಕ್ಸರೇ ಮೆಷಿನ್ಸ್ ಧೂಳೂ ತಿನ್ನುತ್ತಿವೆ. ಅದು ರಾಜ್ಯದ ಬೇರೆ ಬೇರೆ ಭಾಗದಲ್ಲಿ ಇವೆ. ನನ್ನ ಭಾಗಕ್ಕೆ ಎಂದು ಎಕ್ಸ್‌ರೇ ಮೆಷಿನ್ ಕಳುಹಿಸಿದ್ದೀರಿ. ಸಿದ್ದಾಪುರಕ್ಕೆ ಒಂದು ಎಕ್ಸರೇ ಮೆಷಿನ್ ಕಳುಹಿಸಿದ್ದೀರಿ ಅವು ಧೂಳು ತಿನ್ನುತ್ತಿವೆ ಅಲ್ಲಿ ಎಕ್ಸರೇ ಟೆಕ್ನೀಷಿಯನ್ಸ್ ಇಲ್ಲ. ಅಷ್ಟೇ ಅಲ್ಲ ಇವತ್ತು ಕಳಪೆ ಕೆಲಸ ಆಗಿದೆ ಅಂತ ಒಪ್ಪಿಕೊಂಡ ನಂತರ ಅವುಗಳನ್ನು ಸುಧಾರಿಸುವುದು ಅಷ್ಟೇ ಅಲ್ಲ ಅವರ ಮೇಲೆ ಜವಾಬ್ದಾರಿ ಏನು ತೆಗೆದುಕೊಳ್ಳುತ್ತೀರಿ ಅದು ನಿಮ್ಮ ಕಡೆಯಿಂದ ನನಗೆ ಬೇಕಾಗಿದೆ. ನಿಮ್ಮ ಮೇಲೆ ನನಗೆ ಸಾಕಷ್ಟು ವಿಶ್ವಾಸ ಇದೆ ತಾವು ದಕ್ಷ ಒಳ್ಳೆಯ ಮಂತ್ರಿಗಳು ಅಂತ ಕೂಡ ನನಗೆ ಗೊತ್ತು. ಆದರೆ ತಮ್ಮಂತಹ ಮಂತ್ರಿಗಳು ಇದ್ದಾಗ ಈ ಆಸ್ಪತ್ರೆಗಳಿಗೆ 73ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಇಷ್ಟು ಸುಂದರವಾದ ಕಟ್ಟಡಗಳನ್ನು ಕಟ್ಟಿದ್ದಾರೆ ಅವೆಲ್ಲಾ ಕಟ್ಟಡಗಳು ಇವತ್ತು ಖಾಲಿ ಬಿದ್ದಿವೆ. ತಮ್ಮ ಕಡೆ ನಾನು ಈ ಫೋಟೋಗಳನ್ನು ಕಳುಹಿಸಿಕೊಡುತ್ತಿದ್ದೇನೆ. ಇಲ್ಲಿ ಮಾನ್ಯ ಅಧ್ಯಕ್ಷರೇ ತಾವು ನೋಡಬಹುದು ಸುಂದರವಾದ ಕಟ್ಟಗಳನ್ನು ಕಟ್ಟಿದ್ದಾರೆ. ಆದರೆ ಲಾಕ್ ಆಗಿದೆ. ಈಗ ಅಲ್ಲಿ ದನ ಮೇಯುತ್ತಿವೆ, ಕರ ಮೇಯುತ್ತಿವೆ ತಮ್ಮ ಗಮನಕ್ಕೆ ಬಂದಿರಬಹುದು. ಮರ ಬೆಳೆದಿದೆ. ಸರ್ಕಾರ ಇದರ ಬಗ್ಗೆ ಯಾವುದೂ ಕ್ರಮ ತೆಗೆದುಕೊಂಡಿಲ್ಲ ಈಗ ಅವರು ಹೇಳಿದರು 74 ಮಂದಿ ಸಿಬ್ಬಂದಿ ಇದ್ದಾರೆ ನಾವು ಪೋಸ್ಟ್ ಮಾಡುತ್ತೇವೆಂದು ಈ ಸಮಸ್ಯೆ ಕಳೆದ 3-4 ವರ್ಷಗಳಿಂದ ಇದೆ. ಸ್ಯಾಂಕ್ಷನ್ ಮಾಡಿಯೂ ಆಗಿಲ್ಲ. ಹಾಗಾಗಿ ನಿರ್ದಿಷ್ಟ ವೇಳೆಯನ್ನು ನನಗೆ ಹೇಳಿ ಎಷ್ಟು ದಿವಸಗಳ ಒಳಗಾಗಿ ತಾವು ಇಲ್ಲಿಗೆ ಸಿಬ್ಬಂದಿಯನ್ನು ಪೋಸ್ಟ್ ಮಾಡುತ್ತೀರಿ. ಅಂತ ಆ ಕಟ್ಟಡಗಳಿಗೆ ಬಾಗಿಲು ಏನು ಹಾಕಿದೆ ಅದನ್ನೂ ಇನ್ನೂ ತೆಗೆದಿಲ್ಲ ಆ ಬಾಗಿಲು ತೆಗೆದು ಯಾವಾಗ ಉದ್ಘಾಟನೆ ಮಾಡುತ್ತೀರಿ? ಮೂರನೇಯದು ಕಟ್ಟಡದ ಕಳಪೆ ಕೆಲಸ ಮತ್ತು ಬಿಲ್ಡಿಂಗ್ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ಹೇಳಬೇಕು. ಮಾನ್ಯ ಅಧ್ಯಕ್ಷರೇ ತಾವು ನೋಡಬಹುದು ಈ ಗಿಡ ಮರ ಬೆಳೆದಿದ್ದು ತದನಂತರ ಇಲ್ಲಿ ಉಪಕರಣಗಳು ಸಪ್ಲೈ ಮಾಡಿದ್ದಾರೆ. ತಮಗೆ ನಾನು ತೋರಿಸುತ್ತೇನೆ. ಈಗಾಗಲೇ ಬೆಡ್‌ಗಳು ಹರಿದು ಹೋಗಿದ್ದಾವೆ ಉಪಯೋಗ ಮಾಡಿಲ್ಲ, ಯಾರ ಕೈ ಕೂಡ ಹಚ್ಚಿಲ್ಲ ಕಾಟ್ ಮತ್ತು ಬೆಡ್‌ಗಳ ಪರಿಸ್ಥಿತಿ ಅದೇ ಪ್ರಕಾರ ಈ ಐ ಪಿ ಪಿ ಪ್ರಾಜೆಕ್ಟ್ 3ರಲ್ಲಿ ಕೂಡ ಹೀಗೆ ಆಗಿ ಆ ಬೆಡ್‌ಗಳು ಹರಿದು ಹೋಗಿವೆ. ಆಸ್ಪತ್ರೆ ಇನ್ನೂ ಉದ್ಘಾಟನೆ ಆಗಿಲ್ಲ ಆಗಲೇ ಬೆಡ್‌ಗಳು ಬೆಡ್‌ಶೀಟ್ಸ್ ಮತ್ತು ಬ್ಲಾಂಕೇಟ್ಸ್ ಹರಿದು ಹೋಗಿವೆ. ಇದಕ್ಕೆ ಜವಾಬ್ದಾರರು ಯಾರು? ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದು ನನಗೆ ಬೇಕಾಗಿದೆ. ಏಕೆಂದರೆ ಇದು ಇಡೀ 6 ಜಿಲ್ಲೆಗಳಲ್ಲಿ ತಮ್ಮ ಪ್ರವಾಸ ಕಾಲದಲ್ಲಿ ತಮ್ಮ ಗಮನಕ್ಕೆ ಬರಬಹುದು ತಮ್ಮ ಜಿಲ್ಲಯಲ್ಲಿ ಸಹ ಇದೆ. ಇದರ ಬಗ್ಗೆ ಸಾಕಷ್ಟು ಅಸಂತೋಷ ಆಗಿದೆ. ಯಾವ ಉದ್ದೇಶಕ್ಕಾಗಿ ಈ ಕಟ್ಟಡಗಳನ್ನು ಕಟ್ಟಿದರು ಆಸ್ಪತ್ರೆಗಳನ್ನು ಕಟ್ಟಿದರು

ಮಂಜೂರು ಮಾಡಿದರು ಅಪ್‌ಗ್ರೇಡ್ ಮಾಡಿದರು ಅದರಿಂದ ರೋಗಿಗಳಿಗೆ ಯಾವ ರೀತಿಯಿಂದಲೂ ಉಪಯೋಗ ಆಗುತ್ತಿಲ್ಲ. ಹಾಗಾಗಿ ತಾವು ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಬೇಕಾಗಿದೆ. ಈ ಫೋಟೋಗಳನ್ನು ನಾನು ತಮ್ಮ ಮುಖಾಂತರ ಮಾನ್ಯ ಸಚಿವರಿಗೂ ಕೂಡ ಕಳುಹಿಸಿಕೊಡುತ್ತಿದ್ದೇನೆ. ಅವರಲ್ಲಿ ನನಗೆ ವಿಶ್ವಾಸ ಇದೆ. ನನ್ನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರ ಕೊಟ್ಟು ಕ್ರಮ ತೆಗೆದುಕೊಳ್ಳುತ್ತಾರೆ ಅಂತ ನಾನು ಭಾವಿಸಿದ್ದೇನೆ.

ಶ್ರೀ ಶಿವಾನಂದ ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಈ ಐಪಿಪಿ ಮೂರನೇಯ ಯೋಜನೆ ನಮ್ಮ ಬೆಳಗಾಂ ಜಿಲ್ಲೆಯಲ್ಲಿ ಬಂದಿದ್ದಕ್ಕೆ ನಿಜವಾಗಿಯೂ ಸಹ ನಮಗೆ ಬಹಳ ಸಂತೋಷ ಆಯಿತು ಏಕೆಂದರೆ ಎಲ್ಲಾ ಕಡೆ ಈ ರಾಜ್ಯ ಸರ್ಕಾರದಿಂದ ಕಟ್ಟಡ ಆಗುವುದಿಲ್ಲ ಕೇಂದ್ರ ಸರ್ಕಾರದ ನೆರವಿನಿಂದ ಇವತ್ತಿನದಿವಸ ಆ ಕಟ್ಟಡಗಳು ಬಂದವು ಅಂತ ತಿಳಿದುಕೊಂಡೆವು. ಆದರೆ ಯಾವುದೇ ಒಂದು ಮ್ಯಾನೇಜ್‌ಮೆಂಟ್ ಮಾಡುವ ಸಲುವಾಗಿ ಒಂದು ವ್ಯವಸ್ಥೆ ಮಾಡುವ ಸಲುವಾಗಿ ಒಂದು ಸ್ಥಿತಿಯಲ್ಲಿ ಆಗಲಿ ಅಂತ ತಿಳಿದುಕೊಂಡು ನಾನು ಹೇಳುತ್ತೇನೆ. ಏಕೆಂದರೆ ಕೆಲವೊಂದು ವರ್ಕ್‌ಗಳನ್ನು ಭೂಸೇನಾ ನಿಗಮದವರು ವಹಿಸಿಕೊಂಡರು. ಕೆಲವೊಂದು ಜಿಲ್ಲಾ ಪರಿಷತ್ತಿನವರು ವಹಿಸಿಕೊಂಡರು. ಕೆಲವೊಂದು ಲೋಕೋಪಯೋಗಿ ಇಲಾಖೆಯವರು ವಹಿಸಿಕೊಂಡರು. ಹೀಗಾಗಿ ಅವೆಲ್ಲಾ ಅಡ್ಮಿನಿಸ್ಟ್ರೇಶನ್ ಬೆಂಗಳೂರಿನಲ್ಲಿ ಇರುವುದರಿಂದ ಸೂಪರ್‌ವೈಜ್ ಮಾಡುವಂತಹ ಅಧಿಕಾರಿಗಳು ಯಾರೂ ಇಲ್ಲದೆ ಇರುವುದರಿಂದ ಇವತ್ತಿನದಿವಸ ಬಿಲ್ಡಿಂಗ್‌ಗಳು ಪೂರ್ಣಯಾವುವು ಆಗಿಲ್ಲ. ಬೆಳಗಾಂ ಜಿಲ್ಲೆಯಲ್ಲಿ ತಾವು ಬಂದು ನೋಡಿ. ಎಷ್ಟು ಬಿಲ್ಡಿಂಗ್‌ಗಳು ಕಂಪ್ಲೀಟ್ ಆಗಿವೆ. ಇನ್ ಕಂಪ್ಲೀಟ್ ಆಗಿವೆ ಎಂದು ಗೊತ್ತಾಗುತ್ತದೆ. ಎರಡನೇಯದಾಗಿ ಬಿಲ್ಡಿಂಗ್‌ಗಳು ಕಟ್ಟಿದ್ದರೂ ಸಹ ಸೋರುವುದಕ್ಕೆ ಹತ್ತಿವೆ. ಈ ರೀತಿ ಸೋರುವುದಕ್ಕೆ ಹತ್ತಿರುವುದರಿಂದ ಏನಾಗಿದೆ ಅಂದ್ರೆ ನಾವು ಜಿಲ್ಲಾಪರಿಷತ್ತಿನವರನ್ನು ರಿಪೇರಿ ಮಾಡ್ರಿ ಅಂದ ಕೂಡಲೇ ಎಲ್ಲಾ ಅಂತ ಅವರು ಅಂತಾರೆ. ಇದು ಐ ಪಿ ಪಿ ನವರದ್ದು, ಅವರು ಮೊನ್ನೆ ಮೊನ್ನೆ ಕಟ್ಟಿದ್ದಾರೆ 2 ವರ್ಷತನಕ ನಾವು ರಿಪೇರಿ ಮಾಡುವುದಕ್ಕೆ ಬರುವುದಿಲ್ಲ ಈಗ ಕಟ್ಟಿದ ಬಿಲ್ಡಿಂಗ್ ಮೇಲೆ ಮತ್ತೆ ನಾವು ಹೇಗೆ ಖರ್ಚು ಮಾಡುವುದು ಆಡಿಟ್ ಅಬ್‌ಜಕ್ಷನ್ಸ್ ಬರುತ್ತದೆಂದು ಅವರು ಹೇಳುತ್ತಾರೆ. ಅದಕ್ಕೆ ಕಾರಣ ಇಷ್ಟೇ ಏನ್ರಿ ಕಟ್ಟಿದ ಬಿಲ್ಡಿಂಗ್ ಅಂತ ಹೇಳುತ್ತೀರಿ ಮಳೆ ಬಂದರೆ ಛತ್ರಿ ಹಿಡಿದುಕೊಂಡು ಕೊರಬೇಕು ಮಳೆ ಬೀಳುತ್ತಿರುತ್ತದೆ ಸೋರುತ್ತದೆಂದು ಹೇಳುತ್ತಾರೆ. ಮತ್ತೆ ಮೂರನೇಯದು ಏನಾಗಿದೆ ಅಂದ್ರೆ ಕೆಲವು ಕಡೆ ಕಂಪೌಂಡ್ ವಾಲ್ ಕಟ್ಟಿದರು. ಆ ಕಂಪೌಂಡ್ ವಾಲ್ ಕಟ್ಟಿದ ನಂತರ ಅದರ ಮೇಲೆ ರೋಫಿಂಗ್ ಸಹಹಾಕಿಲ್ಲ. ನಿಮಗೆ ನಾನು ಒಂದೇ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಬೈಲಹೊಂಗಲ ಆಸ್ಪತ್ರೆಗೆ ಕಂಪೌಂಡ್ ವಾಲ್ ಕಟ್ಟಿದ್ದಾರೆ ಇವತ್ತಿನ ದಿವಸ ಅದಕ್ಕೆ ರೂಫಿಂಗ್ ಹಾಕಿಲ್ಲ ಆ ರೂಫಿಂಗ್ ಹಾಕದೇ ಇರುವ ಸಲುವಾಗಿ ಕಲ್ಲುಗಳೆಲ್ಲಾ ಕಿತ್ತು ಕಿತ್ತು ಹೋಗುತ್ತಿವೆ ಇದರಿಂದ ನಮಗೇನು ಅನಿಸುತ್ತದೆ ಒಂದು ನ್ಯಾಷನಲ್ ವೇಸ್ಟ್ ಅಂತ ಅನಿಸುತ್ತದೆ ಇನ್ನೂ ಆ ಬಿಲ್ಡಿಂಗ್ ಸಹ ಉದ್ಘಾಟನೆ ಆಗಿಲ್ಲ ತಮ್ಮನ್ನು ಕರೆದುಕೊಂಡು ಹೋಗಿ ಉದ್ಘಾಟನೆ ಮಾಡಬೇಕಂದು ನಾನು ಮಾಡಿದ್ದೇನೆ. ಆದರೆ ತಮ್ಮನ್ನು ಕರೆದುಕೊಂಡು ಹೋಗಿ ಉದ್ಘಾಟನೆ ಮಾಡಬೇಕೆಂದೂ ಸಹ ಅಲ್ಲಿ ಕಂಪೌಂಡ್ ವಾಲ್‌ಇಲ್ಲ ಏನ್ರಿ ಹೇಗೆ ಕಟ್ಟಿದ್ದೀರಿ ಅಂತ ನೀವೇ ಹೇಳುತ್ತೀರಿ. ನೀವು ಊರಲ್ಲಿ ಇದ್ದೀರಿ ನಿಮಗೆ ಗೊತ್ತಿಲ್ಲವೇನ್ರಿ ಅಂತೀರಿ. ಅಲ್ಲಗೇಟ್ ಸಹ ಇಲ್ಲ. ಆ ಗೇಟ್ ಹಾಕದೆ ಇರುವುದರಿಂದ ದನ ಮೇಯುವುದಕ್ಕೆ ಹತ್ತಿವೆ. ಆ ಆಸ್ಪತ್ರೆ ತಯಾರಾಗುವಷ್ಟರಲ್ಲಿ ಹಾರ್ಟಿಕಲ್ಚರ್ ನಿಂದ ಅಥವಾ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಿಂದ ಗಿಡ ಹಾಕಬೇಕು ಅಂತ ನಮ್ಮ ಮನಸ್ಸು ಇದೆ ಕಂಪೌಂಡ್ ವಾಲ್ ಇಲ್ಲದೆ ಇರುವುದರಿಂದ ಇದು ಆಗಿಲ್ಲ. ಜಿಲ್ಲಾ

ಪರಿಷತ್ತಿನವರಿಗೆ ನೀವು ಮಾಡ್ರಿ ಸಾರ್ ಅಂದರೆ ಏನು ಮಾಡುವುದು ಅವರು ಅರ್ಧರ್ಧ ಮಾಡಿ ಬಿಟ್ಟಿದ್ದಾರೆ ಇವತ್ತು ನಿಮ್ಮ ಗೋಕಾಕ್ ತಾಲ್ಲೂಕಿನಲ್ಲಿ ಎಷ್ಟೊಂದು ಗದ್ದಲ ಆಗಿದೆ ಅಂತ ನಿಮಗೂ ಗೊತ್ತಿದೆ ತಾವು ನೋಡಿದ್ದೀರಿ. ಕಂಪೌಂಡ್ ವಾಲ್ ಇವೆಲ್ಲಾ ಅರ್ಧರ್ಧದಲ್ಲಿ ನಿಂತಿವೆ ಒಂದು ವಾಟರ್ ಸಪ್ಲೈ ಸಹ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವು ಗಂಟೆ ಬಾರಿಸಿದರೆ ನಿಮ್ಮ ತಾಲ್ಲೂಕು ಬಗ್ಗೆ ಮಾತನಾಡಬೇಕು ಎಂದು ಅರ್ಥವೇ?

ಶ್ರೀ ಶಿವನಾಂದ ಎಚ್ ಕೌಜಲಗಿ : ಹಾಗಿಲ್ಲ ಸಾರ್. ನಮ್ಮಲ್ಲಿ ಎ.ಎನ್. ಎಂ ಕ್ವಾರ್ಟರ್ಸ್ ಕಟ್ಟಿದ್ದಾರೆ ನಮ್ಮಲ್ಲಿ ಭೂದಾಳ್ ಅಂತ ಇದೆ. ಅಲ್ಲಿ ಕ್ವಾರ್ಟರ್ಸ್ ಕಟ್ಟಿದ್ದಾರೆ ಅಲ್ಲಿಗೆ ಹೋಗಿ, ಅಂದರೆ ಅಲ್ಲಿ ವಾಟರ್‌ಸಪ್ಲೈ ಇಲ್ರಿ ಹೇಗೆ ಹೋಗುವುದು ಅಂತಾರೆ. ಹೀಗಾಗಿ ತಾವು ದಯಮಾಡಿ ನಮ್ಮ ನಾಯಕರು ಹೇಳಿದ ಹಾಗೆ ಇನ್ ಕಂಪ್ಲೀಟ್ ಬಿಲ್ಡಿಂಗ್‌ಗಳನ್ನು ಪೂರ್ಣ ಕಂಪ್ಲೀಟ್ ಮಾಡಬೇಕು, ಸೋರತಕ್ಕಂಥ ಬಿಲ್ಡಿಂಗ್‌ಗಳನ್ನು ರಿಪೇರಿ ಮಾಡಿಸಬೇಕು ಆ ನಂತರ ಕೆಲವು ಕಡೆ ಎಲ್ಲೆಲ್ಲಿ ಬಿಲ್ಡಿಂಗ್‌ಗಳು ಇವೆ ಅವುಗಳನ್ನು ಕಟ್ಟಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ, ಯಾರು ತಪ್ಪಿತಸ್ಥರಿದ್ದಾರೆ ಅವರ ಬಗ್ಗೆ ಚೌಕಾಸಿ ಮಾಡದೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ ಶ್ರೀ ಬಿ.ಎಸ್. ಪಾಟೀಲ್ ಸಾಸನೂರು : (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದಂತಹ ವಿಷಯಗಳ ಬಗ್ಗೆ ನಾನೂ ಕೂಡ ಬಹಳ ಕಡೆ ಪ್ರವಾಸ ಮಾಡುವ ಕಾಲದಲ್ಲಿ ಕಂಡುಕೊಂಡಿದ್ದೇನೆ. ನಾನು ಈ ಖಾತೆಯನ್ನು ವಹಿಸಿಕೊಂಡ ಮೇಲೆ ಕನಿಷ್ಠ ಪಕ್ಷ 200 ಕ್ಕೂ ಮೇಲ್ಪಟ್ಟು ಆಸ್ಪತ್ರೆಗಳಿಗೆ ಅನಿರೀಕ್ಷಿತವಾಗಿ ಭೇಟಿ ಕೊಟ್ಟಿದ್ದೇನೆ ಅಲ್ಲಿರತಕ್ಕಂಥ ಅವ್ಯವಸ್ಥೆಯನ್ನು ಕಂಡು ನನಗೂ ಕೂಡ ಬಹಳಷ್ಟು ಬೇಸರ ಆಗಿದೆ. ಅವರು ಹೇಳಿದ ರೀತಿಯಲ್ಲಿ ಅನೇಕ ಆಸ್ಪತ್ರೆಗಳು ಇವೆ. ಕುಷ್ಟಗಿಗೆ ಹೋಗಿದ್ದಾಗ ನಾನೇ ಕೇಳಿದೆ ಇದು ಆಸ್ಪತ್ರೆಯೋ ಅಥವಾ ದನಗಳ ದಾವಾಖಾನೆಯೋ ಎಂದು ಅದಕ್ಕೆ ಸರಿಯಾದ ಕಂಪೌಂಡ್ ಇಲ್ಲ ಅಲ್ಲಿ ಒಂದು ಎಕ್ಸರೇ ಮೆಷಿನ್ ಬಂದು ಒಂದೂವರೆ ವರ್ಷ ಆಗಿದೆ ಅದನ್ನು ಬಿಚ್ಚಿ ಕೂಡ ನೋಡಿದ್ದು ಇಲ್ಲ ನಾನು ಹೋದ ಕಡೆಯಲ್ಲಿ ಎಲ್ಲಾ ಎಕ್ಸರೇ ಪ್ರಾರಂಭ ಮಾಡುವ ರೀತಿಯಲ್ಲಿ ಕ್ರಮ ತೆಗೆದುಕೊಂಡಿದ್ದೇನೆ. ಅದೇ ರೀತಿಯಲ್ಲಿ ಅಲ್ಲಿ ಯಾರು ಅದಕ್ಷ ಅಧಿಕಾರಿಗಳು ಇದ್ದಾರೆ ಆ ಆಸ್ಪತ್ರೆಯ ಜವಾಬ್ದಾರಿ ನೋಡಿಕೊಳ್ಳುವಂತಹ ವೈದ್ಯಾಧಿಕಾರಿಗಳು ಯಾರಿದ್ದಾರೆ ಅವರ ಮೇಲೆಯೂ ಕೂಡ ಕಟ್ಟುನಿಟ್ಟಿನ ಕ್ರಮ ತೆಗೆದುಕೊಂಡಿದ್ದೇನೆ.

ಬಹಳಷ್ಟು ಕಡೆ ನಾನು ಅಂಥ ವೈದ್ಯರುಗಳನ್ನು ಸಸ್ಪೆಂಡ್ ಕೂಡ ಮಾಡಿದ್ದೇನೆ. ಸಸ್ಪೆಂಡ್ ಮಾಡಿದರೆ ಅದೊಂದೇ ಸಾಲದು. ಏಕೆಂದರೆ ಹಾಗೆ ಮಾಡಿದರೆ ಅವರಿಗೇ ಅನುಕೂಲವಾಗುತ್ತದೆ. 6-7 ತಿಂಗಳುಗಳ ಕಾಲ ಮನೆಯಲ್ಲಿ ಕುಳಿತುಕೊಳ್ಳುತ್ತಾರೆ, ಖಾಸಗಿ ಪ್ರಾಕ್ಟೀಸ್ ಮಾಡುತ್ತಾರೆ. ಶೇಕಡಾ 75ರಷ್ಟು ಸಂಬಂಳ ಬರುತ್ತದೆ. ಆ ಮೇಲೆ ಯಾರದ್ದಾದರೂ ಶಿಫಾರಸ್ಸನ್ನು ತಂದು ರಿಇನ್‌ಸ್ಟೇಟ್ ಮಾಡಿಸಿಕೊಂಡು ಎಲ್ಲಿಗಾದರೂ ಹಾಕಿಸಿಕೊಂಡುಬಿಡುತ್ತಾರೆ. ಇದೊಂದು ಬಹಳ ದಿವಸಗಳಿಂದ ಬೆಳೆದುಕೊಂಡು ಬಂದ ಅನಿಷ್ಟ ಸಂಪ್ರದಾಯ ಮಾನ್ಯ ವಿರೋಧಪಕ್ಷದ ನಾಯಕರು ಹೇಳಿದ ಪ್ರಕಾರ ಲೋಪದೋಷಗಳನ್ನು ಸರಿಪಡಿಸಲು ನಾನು ಬಹಳಷ್ಟು ಪ್ರಯತ್ನಗಳನ್ನು ಮಾಡುತ್ತಾ ಇದ್ದೇನೆ. ಅದರಲ್ಲೂ ಬಹಳಷ್ಟು ಆಸ್ಪತ್ರೆಗಳ ರಿಪೇರಿ ಸಲುವಾಗಿ ಶ್ರಮಿಸುತ್ತಾ ಇದ್ದೇನೆ. ಆದರೆ ಅಲ್ಲಿ ಏನಾಗಿದೆ ಅಂದರೆ, ಈ ಕಟ್ಟಡದ ರಿಪೇರಿ ಕಾರ್ಯಗಳು ನಮ್ಮ ಸರಕಾರದ ವ್ಯಾಪ್ತಿಯಲ್ಲಿ ಬರುವುದಿಲ್ಲ. ಇದು ಜಿಲ್ಲಾ ಪರಿಷತ್‌ನ ವ್ಯಾಪ್ತಿಯಲ್ಲಿ ಬರುತ್ತದೆ. ಕಟ್ಟಡದ ರಿಪೇರಿ, ಕಾಂಪೌಂಡ್‌ವಾಲ್‌ಗಳ ರಿಪೇರಿ, ಕುಡಿಯುವ ನೀರಿನ

ಸಮಸ್ಯೆಯ ನಿವಾರಣೆಯಾಗಲೀ, ಇವೆಲ್ಲವೂ ಜಿಲ್ಲಾಪರಿಷತ್‌ನ ವ್ಯಾಪ್ತಿಯಲ್ಲಿ ಬರುವುದರಿಂದ ನಾವು ನಮ್ಮ ಸಮಸ್ಯೆಗಳ ಬಗ್ಗೆ ಸದಸ್ಯರಿಂದಾಗಲೀ, ಸಾರ್ವಜನಿಕರಿಂದಾಗಲೀ ಬಂದಂಥ ದೂರುಗಳನ್ನು ಜಿಲ್ಲಾಪರಿಷತ್‌ನವರಿಗೇ ಕಳುಹಿಸಿ ಅವರ ಮೂಲಕವೇ ರಿಪೇರಿ ಮಾಡಿಕೊಡುವ ಒಂದು ಪರಿಸ್ಥಿತಿ ಇದೆ. ಅದರ ಬಗ್ಗೆ ಜಿಲ್ಲಾಪರಿಷತ್‌ನ ಮುಖ್ಯ ಕಾರ್ಯನಿರ್ವಾಹಕರವನ್ನು ಹೋದ ಕಡೆಗಳಿಲ್ಲೆಲ್ಲ ಕರೆದು ಮಾತನಾಡಿ ಸಾಧ್ಯವಾದಷ್ಟು ಮಟ್ಟಿಗೆ ಈ ಆಸ್ಪತ್ರೆಗಳನ್ನು ಹೆಚ್ಚಿಗೆ ಸುವ್ಯವಸ್ಥಿತ ರೀತಿಯಲ್ಲಿಡಲು ನಾನು ಪ್ರಯತ್ನ ಮಾಡುತ್ತಾ ಇದ್ದೇನೆ. ಅದಲ್ಲದೆ ಐಪಿಪಿ(3) ರಲ್ಲಿ ಕಟ್ಟಿದ ಕಟ್ಟಡಗಳು ಬಹಳಷ್ಟು ಕಡೆಗಳಲ್ಲಿ ನಾಡುರಸ್ತು ಆಗಿವೆ. ಅವುಗಳಲ್ಲಿ ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನು ಈ ವರ್ಷದಲ್ಲಿ ಮಾಡಿ ಜಿಲ್ಲಾ ಪರಿಷತ್‌ಗಳ ಮುಖಾಂತರ ಅವುಗಳ ಕಟ್ಟಡಗಳನ್ನು ಸುವ್ಯವಸ್ಥಿತವಾಗಿ ಇಡುವ ಬಗ್ಗೆ ಸರಕಾರವು ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳುವುದಲ್ಲದೆ ಐಪಿಪಿ 3ರಲ್ಲಿ ನಮ್ಮ ಗುಲ್ಬರ್ಗಾ ವಿಭಾಗದಿಂದ ಬಳ್ಳಾರಿ ಜಿಲ್ಲೆ, ಬೆಳಗಾವಿ ವಿಭಾಗದಿಂದ ಕಾರವಾರ ಜಿಲ್ಲೆ ಅದನ್ನು ಐಪಿಪಿ 9 ಎಂಬ ಕಾರ್ಯಕ್ರಮದಲ್ಲಿ ಅಳವಡಿಸಿಕೊಂಡು ಎರಡೂ ಜಿಲ್ಲೆಗಳನ್ನು ಅದರಲ್ಲಿ ಕೂಡಿಸಿಕೊಂಡಿದ್ದೇವೆ. ಅದೂ ಅಲ್ಲದೇ ಇನ್ನೂ ಎಂಟು ಜಿಲ್ಲೆಗಳು. ಅವುಗಳಲ್ಲಿ ಮೈಸೂರು ವಿಭಾಗದ ಆರು ಜಿಲ್ಲೆಗಳು, ಬೆಂಗಳೂರು ವಿಭಾಗದ ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಗಳು ಈ ಐಪಿಪಿ -9 ರಲ್ಲಿ ಅಳವಡಿಸಿ ಕೊಳ್ಳುತ್ತೇವೆ. ಅದಕ್ಕಾಗಿ 107 ಕೋಟಿ ರೂಪಾಯಿಗಳ ಹಣಸಹಾಯ ಕೂಡ ಬಂದಿದೆ. ಅದಕ್ಕೆ ಮಂಜೂರಾತಿ ಕೂಡ ದೊರಕಿದೆ. ಏಪ್ರಿಲ್ ಒಂದನೇ ತಾರೀಖಿನಿಂದ ಈ ಕಾರ್ಯವು ಪ್ರಾರಂಭ ಆಗುತ್ತಾ ಇದೆ. ಆದರಿಂದ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಆಸ್ಪತ್ರೆಯ ಕಟ್ಟಡ, ಸಿಬ್ಬಂದಿ ವಸತಿ ಕಟ್ಟಡ ಇವೆಲ್ಲವೂ ಪೂರ್ತಿಯಾಗಿ ಮಾಡುವ ವ್ಯವಸ್ಥೆಯನ್ನು ನಾವು ಮಾಡುತ್ತಾ ಇದ್ದೇವೆ. ಅದಲ್ಲದೇ ಇನ್ನೂ ಒಂದೆರಡು ಮಿಡ್‌ಲಿವೆಲ್ಡ್ ಹಾಸ್ಪಿಟಲ್‌ಗಳನ್ನು ಮಾಡುತ್ತಾ ಇದ್ದೇವೆ. ಅದಕ್ಕೆ 160 ಕೋಟಿ ರೂಪಾಯಿಗಳ ಒಂದು ಯೋಜನೆ ಇದೆ. ತಾಲ್ಲೂಕು ಮತ್ತು ಜಿಲ್ಲಾಮಟ್ಟದ ಆಸ್ಪತ್ರೆಗಳು ಕೂಡ ಹೆಚ್ಚಿನ ಒಂದು ವ್ಯವಸ್ಥೆಯನ್ನು ಸುವ್ಯವಸ್ಥೆ ಮಾಡುವ ಸಲುವಾಗಿ ಕೈಗೊಳ್ಳಲಾಗುತ್ತದೆ ಎಂಬ ಮಾತನ್ನು ಹೇಳುತ್ತಾ, ಈ ಆಸ್ಪತ್ರೆಗಳ ಸುಧಾರಣೆ ಸಲುವಾಗಿ ಸರಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳ ಬೇಕೋ ಅವೆಲ್ಲವನ್ನೂ ಮಾಡುತ್ತಿದ್ದೇವೆ. ಇನ್ನೂ ವೈದ್ಯರುಗಳ ಸಲುವಾಗಿ ತಾವುಗಳು ಹೇಳಿದ್ದೀರಿ. ನಾವು ಈಗಾಗಲೇ ಸಾಕಷ್ಟು ವೈದ್ಯಾಧಿಕಾರಿಗಳನ್ನು ತುಂಬಿದ್ದೇವೆ. ಇನ್ನೊಂದು ತಿಂಗಳಲ್ಲಿ ನಮ್ಮ ರಾಜ್ಯದ ಯಾವ ಮೂಲೆಗೇ ಹೋದರೂ ಕೂಡ ಪುರುಷ ಅಥವಾ ಮಹಿಳಾ ವೈದ್ಯರು ಇಲ್ಲ ಎನ್ನುವ ಕೊರಗು ಯಾರಿಂದಲೂ ಬಾರದ ಹಾಗೆ ನಾವು ಮಾಡುವ ಒಂದು ಪ್ರಕ್ರಿಯೇ ಪ್ರಾರಂಭವಾಗಿದೆ. ಇನ್ನೊಂದು ತಿಂಗಳ ಅವಧಿಯಲ್ಲಿ ಆ ಕೆಲಸವನ್ನು ಪೂರ್ತಿ ಮಾಡುತ್ತೇನೆ ಎಂಬ ಭರವಸೆಯನ್ನು ಕೊಟ್ಟು ಗ್ರೂಪ್ (ಡಿ) ಮತ್ತು (ಸಿ) ಗುಂಪಿನ ನೌಕರರ ನೇಮಕಕ್ಕೆ ಕೂಡ ಆರ್ಥಿಕ ಇಲಾಖೆಯ ಮಂಜೂರಾತಿಯು ದೊರಕಿದೆ. ಗ್ರೂಪ್ - ಡಿ ಯಲ್ಲಿ 1200 ನೌಕರರನ್ನು ತೆಗೆದುಕೊಳ್ಳುವಂಥ ಒಂದು ಮಂಜೂರಾತಿಯು ಸಿಕ್ಕಿದ್ದು ಆ ಕೆಲಸವನ್ನು ಇನ್ನು 15 ದಿವಸಗಳಲ್ಲಿಯೇ ಪ್ರಾರಂಭ ಮಾಡುತ್ತೇವೆ. 500 ನೌಕರರನ್ನು ಬೇರೆ ಬೇರೆ ಇಲಾಖೆಗಳಿಂದ ತೆಗೆದುಕೊಳ್ಳಲು ನಮಗೆ ಮಂಜೂರಾತಿಯು ಸಿಕ್ಕಿದೆ. ಮುಂದಿನ ದಿನಮಾನಗಳಲ್ಲಿ ಸಾಧ್ಯವಾದಷ್ಟು ಸುಧಾರಣೆಗಳನ್ನು ಮಾಡುತ್ತೇವೆ. ನೂರಕ್ಕೆ ನೂರಷ್ಟು ಸುಧಾರಣೆಗಳನ್ನು ಮಾಡಲಾಗದಿದ್ದರೂ ಕೂಡ ನೂರಕ್ಕೆ 85ರಷ್ಟು ಸುಧಾರಣೆಗಳನ್ನು ಮಾಡುತ್ತೇವೆ ಎಂಬ ಆತ್ಮವಿಶ್ವಾಸವು ಸರಕಾರಕ್ಕೆ ಇದೆ. ನಮ್ಮ ಆರೋಗ್ಯ ಇಲಾಖೆಯಲ್ಲಿ ಸಾಕಷ್ಟು ಕೆಲಸಕಾರ್ಯಗಳು ಆಗಿವೆ ಎಂಬ ಬಗ್ಗೆ ಮಾನ್ಯ ವಿರೋಧ ಪಕ್ಷದ

ನಾಯಕರಿಗೆ ಮಾನ್ಯ ಶಿವಾನಂದ ಕೌಜಲಗಿಯವರಿಗೆ ಆಗಿದೆ ಎಂದು ನಾನು ಅಂದುಕೊಂಡಿದ್ದೇನೆ. ತಮ್ಮೆಲ್ಲರ ಸಹಕಾರ, ಸಲಹೆ-ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ದಿನಗಳಲ್ಲಿ ಜನರ ಆರೋಗ್ಯದ ಬಗ್ಗೆ ಹೆಚ್ಚಿನ ಗಮನವನ್ನು ಸರಕಾರವು ನೀಡುತ್ತದೆ ಎಂಬ ವಿಚಾರವನ್ನು ತಮ್ಮೆಲ್ಲರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : ಮಾನ್ಯ ಸಚಿವರು ಬಹಳ ಪ್ರಾಮಾಣಿಕವಾಗಿ ಆಸ್ಪತ್ರೆಗಳ ಗಂಭೀರ ಪರಿಸ್ಥಿತಿಯ ಬಗ್ಗೆ ಹೇಳಿದ್ದೀರಿ. ನಾನು ಐಪಿಪಿ-3ರ ಬಗ್ಗೆ ಎರಡು ನೇರವಾದ ಪ್ರಶ್ನೆಗಳನ್ನು ಕೇಳಿದ್ದೇನೆ. 5 ಕೋಟಿ 26 ಲಕ್ಷ ರೂಪಾಯಿಗಳ ಇತರ ವೆಚ್ಚ ಎಂದು ಇದೆಯಲ್ಲ, ಅದು ಏನು ಎಂಬ ಬಗ್ಗೆ ವಿವರ ಕೇಳಿದ್ದೇನೆ. ಎರಡನೇಯದಾಗಿ ಎಕ್ಸರೇ ಮೆಶಿನ್ಸ್ ಒಟ್ಟು 9 ಇನ್‌ಸ್ಟಾಲ್ ಆಗಿವೆ. ಅವುಗಳನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಅದಕ್ಕೆ ತಮ್ಮ ಉತ್ತರ ಬಂದಿಲ್ಲ. ಮೂರನೇಯದಾಗಿ ಅಡಿಶನಲ್ ಸಿಬ್ಬಂದಿ ನೇಮಕ ಮಾಡಿಕೊಳ್ಳುತ್ತೀರಿ ಎಂದು ಹೇಳಿದ್ದೀರಲ್ಲ? ಅದನ್ನು ಎಷ್ಟು ದಿನಗಳಲ್ಲಿ ಮಾಡುತ್ತೀರಿ? ಅದಕ್ಕೆ ತಮ್ಮ ಉತ್ತರವನ್ನು ಬಯಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಸಚಿವರು ಬಹಳ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ತಮ್ಮ ಪ್ರಾಮಾಣಿಕತೆಯ ಬಗ್ಗೆ ನಾವು ಪ್ರಶ್ನೆ ಮಾಡುತ್ತಿಲ್ಲ. ಹಿಂದೆ ಏನು ಆಗಿದೆ ಅದು ನಿಮ್ಮ ಮೇಲೆ ಬರುತ್ತಾ ಇದೆ. ಇನ್‌ಕಂಪ್ಲೀಟ್ ಆದ ಕಟ್ಟಡಗಳನ್ನು ಜಿಲ್ಲಾಪರಿಷತ್‌ನವರು ಮಾಡಲು ಸಾಧ್ಯವಾಗುವುದಿಲ್ಲ. ಹೊಸ ಕಟ್ಟಡಕ್ಕೆ ಎರಡು ವರ್ಷಗಳ ತನಕ ರಿಪೇರಿ ಖರ್ಚನ್ನು ಮತ್ತೆ ಹಾಕಲು ಬರುವುದಿಲ್ಲವೆಂದು ಹೇಳುತ್ತಾರೆ. ಅಂಥವನ್ನು ತಾವುಗಳು ಹೇಗೆ ರಿಪೇರಿ ಮಾಡಿಸುತ್ತೀರಿ?

ಶ್ರೀ ಬಿ.ಎಸ್. ಪಾಟೀಲ್ ಸಾಸನೂರ್ : ಸನ್ಮಾನ್ಯ ಅಧ್ಯಕ್ಷರೇ ವಿರೋಧ ಪಕ್ಷದ ನಾಯಕರು ಕೇಳಿದ ರೀತಿಯಲ್ಲಿ ಇತರ ನಿರ್ವಹಣೆ ಖರ್ಚುವೆಚ್ಚ 5.26 ಕೋಟಿ ರೂಪಾಯಿಗಳನ್ನು ಏಕೆ ಖರ್ಚು ಮಾಡಿದ್ದೀರಿ ಎಂದು ಕೇಳಿದ್ದಾರೆ .ಅದರ ಎಲ್ಲಾ ವಿವರಗಳು ಸದ್ಯಕ್ಕೆ ನನ್ನ ಹತ್ತಿರ ಇಲ್ಲ. ಅದನ್ನು ತಮಗೆ ಬೇಕಾದಲ್ಲಿ ಪ್ರತ್ಯೇಕವಾಗಿ ಒದಗಿಸಿಕೊಡುತ್ತೇನೆ. ಇನ್ನು 9 ಎಕ್ಸ್‌ರೇ ಮಶಿನ್‌ಗಳು ಹಾಗೆಯೇ ಬಿದ್ದಿವೆ ಎಂದು ತಾವುಗಳು ಹೇಳಿದ್ದೀರಿ. ಅಂಥವುಗಳು ಯಾವ ಕಡೆಗಳಲ್ಲಿ ಆಗಿವೆ ಎಂಬುದನ್ನು ನನ್ನ ಗಮನಕ್ಕೆ ತಂದರೆ ಅವುಗಳನ್ನು ಅದಷ್ಟು ಬೇಗ ಪ್ರಾರಂಭಿಸಲು ವ್ಯವಸ್ಥೆ ಮಾಡುತ್ತೇನೆ. ನನಗೆ ತಿಳಿದ ಮಟ್ಟಿಗೆ ನಾವು ಕಳುಹಿಸಿದಂಥ ಯಾವ ಎಕ್ಸರೇ ಮಿಶನ್ ಗಳನ್ನು ಕೂಡ ಹಾಗೆಯೇ ಬಿಟ್ಟಿಲ್ಲ. ಅವುಗಳಿಲ್ಲವನ್ನೂ ಚಾಲೂ ಮಾಡುವಂಥ ಕಾರ್ಯಗಳು ಪ್ರಾರಂಭವಾಗಿವೆ ಎಂಬ ಮಾತನ್ನು ಈಗಾಗಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಆದ್ದರಿಂದ ಆ ಕುರಿತಾದ ವಿವರಗಳನ್ನು ಕೊಟ್ಟರೆ ಅಂಥ ಕಡೆಗಳಲ್ಲಿ ಯಾವ ಯಾವ ಮಿಶನಗಳನ್‌ಗಳನ್ನು ಯಾವಾಗ ಪ್ರಾರಂಭ ಮಾಡುತ್ತೇವೆ. ಎಂಬ ವಿವರಗಳನ್ನು ಕೂಡ ತಮಗೆ ತಿಳಿಸುತ್ತೇನೆ. ಸಿಬ್ಬಂದಿ ನೇಮಕವನ್ನು ಕೂಡ ಆದಷ್ಟು ಬೇಗ ಮಾಡುತ್ತೇನೆ. ಮಾನ್ಯ ಕೌಜಲಗಿಯವರು ಹೇಳಿದ ಹಾಗೆ ರಿಪೇರಿ ಕೆಲಸವನ್ನು ಜಿಲ್ಲಾಪರಿಷತ್ ನವರು ಮಾಡಲು ಸಾಧ್ಯವಿಲ್ಲವೆಂದು ಅವರು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದು ಅವರು ಮಾಡಬೇಕಾದಂಥ ಕರ್ತವ್ಯವಾಗಿದೆ. ಇದರ ಎಲ್ಲಾ ನಿರ್ವಹಣೆಯ ಕೆಲಸವು ಅವರಿಗೇ ಬಿಟ್ಟಿರತಕ್ಕಂಥಾದ್ದು. ನಮಗೆ ಹೇಗೆ ಆಯವ್ಯಯ ಇದೆಯೋ ಅವರಿಗೂ ಕೂಡ ಒಂದು ಲಿಂಕ್ ಡಾಕ್ಯುಮೆಂಟ್ ಎಂದು ಮಾಡಿಕೊಂಡು ಅದರ ಮೂಲಕ ನಮ್ಮ ಆರೋಗ್ಯ ಇಲಾಖೆಗೆ ಸಂಬಂಧಪಟ್ಟಂಥ ಎಲ್ಲಾ ಕಟ್ಟಡಗಳನ್ನು ಹೊಸದಾಗಿ ಕಟ್ಟುವಂಥವು ಮತ್ತು ರಿಪೇರಿ ಮಾಡತಕ್ಕಂಥವುಗಳನ್ನು ಮಾಡುವುದು ಅವರ ಕರ್ತವ್ಯವಾದ ಕಾರಣ ಅವರಿಗೆ ಕಟ್ಟಲು ಆಗುವುದಿಲ್ಲವೆಂದು ಹೇಳಲಿಕ್ಕೆ ಆಗುವುದಿಲ್ಲ ಅವರು ಅದಕ್ಕೆ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಲೇ ಬೇಕಾಗುತ್ತದೆ. ನಿರ್ವಹಣೆಯ ಸಂಪೂರ್ಣವಾದ ಜವಾಬ್ದಾರಿ ಕೂಡ ಸಂಪೂರ್ಣವಾಗಿ ಅವರ ಮೇಲೆಯೇ

ಇರುವುದರಿಂದ ಅವರು ಮಾಡಲೇ ಬೇಕಾಗುತ್ತದೆ. ಎಲ್ಲ ಎಂದು ಹೇಳುವುದಕ್ಕಾಗುವುದಿಲ್ಲ ಎಂದು ತಿಳಿಸ ಬಯಸುತ್ತೇನೆ.

ನಿಯಮ 334ರ ಮೇರೆಗೆ

ಬೆಂಗಳೂರು ನಗರ ಸಿವಿಲ್ ಕೋರ್ಟು ಸಂಕೀರ್ಣದಲ್ಲಿ ಜನರೇಟರನ್ನು ಅಳವಡಿಸುವುದು.

ಶ್ರೀ ಜಿ.ಪುಟ್ಟಸ್ವಾಮಿ ಗೌಡರು (ಹೊಳೇ ನರಸೀಪುರ) ; ಮಾನ್ಯ ಅಧ್ಯಕ್ಷರೇ, ಬೆಂಗಳೂರು ಸಿವಿಲ್ ಕೋರ್ಟ್ ಸಂಕೀರ್ಣದಲ್ಲಿ ಒಂದು ಜನರೇಟರ್‌ನ್ನು ಸುಮಾರು 30 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒದಗಿಸಲು ಸರಕಾರವು ಈಗಾಗಲೇ ತೀರ್ಮಾನ ಕೈಗೊಂಡಿದೆ ಆದರೆ ಇದುವರೆಗೂ ಹಣವನ್ನು ಬಿಡುಗಡೆ ಮಾಡಿಲ್ಲ. ಇಲ್ಲಿ ಕೆಲಸ ಮಾಡುತ್ತಿರುವ ವಕೀಲರಿಗೆ ಮತ್ತು ನ್ಯಾಯಾಧೀಶರುಗಳಿಗೆ ವಿಶೇಷವಾಗಿ ಕಕ್ಷಿದಾರರುಗಳಿಗೂ ಕೂಡ ಅನಾನುಕೂಲವಾಗಿದೆ. ಇದಕ್ಕೆ ಸರಕಾರದವರು ಕೂಡಲೇ ಹಣವನ್ನು ಬಿಡುಗಡೆ ಮಾಡಿ ಜನರೇಟರ್‌ನ್ನು ಸ್ಥಾಪಿಸ ಬೇಕೆಂದು ಮಾನ್ಯ ಕಾನೂನು ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ರಾಮಲಿಂಗ ರೆಡ್ಡಿ (ಕೈಗಾರಿಕಾ ಸಚಿವರು) (ಮಾನ್ಯ ಲೋಕೋಪಯೋಗಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದ ಸಿಟಿ ಸಿವಿಲ್ ನ್ಯಾಯಾಲಯಗಳ ಸಂಕೀರ್ಣಕ್ಕೆ 320ಕೆ.ವಿ.ಎ.ಜನರೇಟರ್ ಸೆಟ್ ಅನ್ನು 31.65ಲಕ್ಷರೂ.ಗಳ ಅಂದಾಜಿನಲ್ಲಿ ಅಳವಡಿಸಲಿಕ್ಕೆ ಸರ್ಕಾರವು ದಿನಾಂಕ 17-8-1993ರಲ್ಲಿ ಅನುಮೋದನೆ ನೀಡಿದೆ. ಇದನ್ನು ತೆಗೆದುಕೊಳ್ಳುವ ಸಲುವಾಗಿ ಬೆಂಗಳೂರು ಕಟ್ಟಡ ವಿಭಾಗದ ಕಾರ್ಯಪಾಲಕ ಅಭಿಯುಂತರವರು ಗುತ್ತಿಗೆಯನ್ನು ಕರೆದಿದ್ದು, ದಿನಾಂಕ 16-3-1994ರಂದು ಟೆಂಡರನ್ನು ಸ್ವೀಕರಿಸುರುವ ಕೊನೆಯ ದಿನವಾಗಿತ್ತು.

ಪ್ರಸಕ್ತ ವಿಷಯವು ಇನ್ನೂ ಟೆಂಡರ್ ಸ್ವೀಕರಿಸುವ ಹಂತದಲ್ಲಿದ್ದು, ಹಣ ಬಿಡುಗಡೆಯ ಪ್ರಶ್ನೆ ಈಗ ಉದ್ಭವಿಸುವುದಿಲ್ಲ.

ಬೆಳಗಾಂ ಜಿಲ್ಲೆ ಬೈಲ ಹೊಂಗಲ ತಾಲ್ಲೂಕಿನ ಲಿಂಗದ ಹಳ್ಳಿ ಗ್ರಾಮಕ್ಕೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

ಶ್ರೀ ಶಿವಾನಂದ ಎಚ್. ಕೌಜಲಗಿ (ಬೈಲಹೊಂಗಲ) ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕಿನ ಲಿಂಗದಹಳ್ಳಿಯಲ್ಲಿ ಹಿಂದುಳಿದ ಜನಾಂಗದವರು ವಾಸವಾಗಿದ್ದಾರೆ.ಈ ಗ್ರಾಮಕ್ಕೆ ಇನ್ನೂವರೆಗೂ ವಿದ್ಯುತ್ ನ್ನು ಒದಗಿಸಿರುವುದಿಲ್ಲ. ಸ್ವತಂತ್ರ್ಯ ಸಿಕ್ಕು ಎಷ್ಟೋ ವರ್ಷಗಳಾದರೂ ಈ ಹಿಂದುಳಿದ ಜನರಿಗೆ ವಿದ್ಯುತ್‌ನ್ನು ಒದಗಿಸದೇ ಇರುವುದರಿಂದ ಅವರು ಈ ಸರಕಾರದಲ್ಲಿ ಹಿಂದುಳಿದವರನ್ನು ಯಾರೂ ಕೇಳವವರು ಇಲ್ಲವೆಂದು ಅನ್ನಲಿಕ್ಕೆ ಹತ್ತಿದ್ದಾರೆ. ಈ ಗ್ರಾಮಕ್ಕೆ ವಿದ್ಯುತ್ ಒದಗಿಸಬೇಕಾದಲ್ಲಿ 40 ಸಾವಿರ ರೂಪಾಯಿಗಳನ್ನು ಸಾರ್ವಜನಿಕರು ವಂತಿಗೆ ರೂಪದಿಂದಾಗಲೀ, ಅಥವಾ ಇರಿಗೇಶನ್ ಇಲಾಖೆಯವರಾಗಲೀ ತುಂಬಿದಾಗ ಮಾತ್ರ ವಿದ್ಯುತ್ ಒದಗಿಸಲಾಗುವುದೆಂದು ಸ್ಥಳೀಯ ಕೆ.ಇ.ಬಿ. ಅಧಿಕಾರಿಗಳು ಹೇಳಲಿಕ್ಕೆ ಹತ್ತಿರುವರು. ಅಥವಾ ಬೋರ್ಡಿನವರು 40ಸಾವಿರ ರೂಪಾಯಿಗಳನ್ನು ಈ ಕೆಲಸಕ್ಕೆ ಒದಗಿಸಿದಲ್ಲಿ ವಿದ್ಯುತ್ ಒದಗಿಸಲಾಗುವುದೆಂದು ತಿಳಿಸಿರುವರು. ಆದಕಾರಣ ಹಿಂದುಳಿದವ ಅಭಿವೃದ್ಧಿಗಾಗಿ ಕೆ.ಇ.ಬಿ. ಬೋರ್ಡಿನವರು 40 ಸಾವಿರ ರೂ.ಗಳನ್ನು ಬೋರ್ಡಿನಿಂದ ಕೊಟ್ಟು ವಿದ್ಯುತ್‌ನ್ನು ಒದಗಿಸಬೇಕೆಂದು ಹಾಗೂ ಈ ಹಿಂದೆ ವಿಧಾನಸಭೆಯಲ್ಲಿ ಕೊಟ್ಟ ಆಶ್ವಾಸನೆಯನ್ನು ಪೂರೈಸಬೇಕೆಂದು ನಾನು ತಮ್ಮ ಮುಖಾಂತರ ಉಪ-ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ.ಎ. ನಿಸಾರ್ ಅಹಮದ್ : (ಉಪ-ಮುಖ್ಯಮಂತ್ರಿಯವರ ಪರವಾಗಿ) Sir, I would like to make the following statement. Lingadahalli village in